ಇಲಾಖೆಯ ವಶದಲ್ಲಿರುವ 20 ಎಕರೆ ಜಮೀನಿಗೆ ಬೇಲಿ ಹಾಕಿದ್ದು ಇದರಲ್ಲಿ ಯಾವುದೇ ಜಮೀನು ಒತ್ತುವರಿಯಾಗಿರುವುದಿಲ್ಲ. ಆದರೆ ಸಾಮಾಜಿಕ ಅರಣ್ಯಕ್ಕೆ ನೀಡಿರುವ 30 ಎಕರೆಗಳಲ್ಲಿ 1977 ರಿಂದ 2001 ರವರೆಗೆ 8 ಕುಟುಂಬಳಿಂದ 6.10 ಎಕರೆ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಗಮನಿಸಲಾಗಿದೆ.

**ಸೂಳ್ಯ ತಾಲ್ಲೂಕಿನಲ್ಲಿ ಗಣಿಗಾರಿಕೆಯಿಂದ ಬರುತ್ತಿರುವ ಆದಾಯ**

1781(2245): ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸುಳ್ಯ ತಾಲ್ಲೂಕಿನ ಯಾವ ಯಾವ ಗ್ರಾಮಗಳಲ್ಲಿ ಯಾವ ಗಣಿಗಾರಿಕೆಯನ್ನು ಮಾಡಲಾಗುತ್ತಿದೆ; ಎಷ್ಟೆಷ್ಟು ವಿಸ್ತೀರ್ಣದಲ್ಲಿ ಮಾಡಲಾಗುತ್ತಿದೆ.

ಆ. ಇದರಿಂದ ಸರ್ಕಾರಕ್ಕೆ ಬರುವ ತೆರಿಗೆ ಎಷ್ಟು; ಪೂರ್ತಿ ವಿವರ ನೀಡುವುದು;

ಇ. ಸದರಿ ಗಣಿಗಾರಿಕೆಯಿಂದ ಕಲ್ಲುಗಳನ್ನು ಹೆಚ್ಚು ಸಾಗಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಡಾಂಬರು ರಸ್ತೆ ಹಾಗೂ ಕಚ್ಚಾ ರಸ್ತೆಗಳು ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬರದಿದ್ದಲ್ಲಿ, ಗಣಿ ಇಲಾಖೆಯು ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಅ. ಮುರಕಲ್ಲು, ಕಟ್ಟಡ ಕಲ್ಲು, ಸಾಮಾನ್ಯ ಮರಳಿಗಾಗಿ ಕಲ್ಲು ಗಣಿ ಗುತ್ತಿಗೆಗಳನ್ನು ಈ ಕೆಳಕಂಡ ಗ್ರಾಮಗಳಲ್ಲಿ ನೀಡಿದೆ.

| ಕ್ರಮ ಸಂಖ್ಯೆ | ಗ್ರಾಮ | ಖನಿಜ | ಗುತ್ತಿಗೆಗಳ ಸಂಖ್ಯೆ | ವಿಸ್ತೀರ್ಣ ಎಕರೆಯಲ್ಲಿ |
|---|---|---|---|---|
| 1. | ದೇವಚಲ | ಕಟ್ಟಡಕಲ್ಲು | 14 | 7.15 |
| 2. | ಅಜ್ಜಾವರ | ಮುರಕಲ್ಲು | 10 | 5.90 |
| 3. | ಸಂಪಾಜಿ | ಮುರಕಲ್ಲು | 3 | 1.50 |
| 4. | ಮುಂಡೇಕೋಲು | ಮುರಕಲ್ಲು | 1 | 0.50 |
| 5. | ಯೇನೆಕಲ್ಲು | ಮುರಕಲ್ಲು | 3 | 1.50 |
| 6. | ಅಮರ ಪಡ್ನೂರು | ಮುರಕಲ್ಲು | 3 | 1.50 |
| 7. | ಮರಕಂಜ | ಕಟ್ಟಡಕಲ್ಲು | 1 | 0.50 |
| 8. | ನಾಲ್ಕುರು | ಮುರಕಲ್ಲು | 1 | 0.50 |
| 9. | ಜಾಲ್ಸೂರು | ಮುರಕಲ್ಲು | 1 | 0.50 |
| 10. | ಗುತ್ತಿಗಾರು | ಕಟ್ಟಡಕಲ್ಲು | 1 | 0.50 |
| 11. | ಸುಬ್ರಹ್ಮಣ್ಯ | ಮುರಕಲ್ಲು | 1 | 2.00 |

ಇದಲ್ಲದೆ, ನೆಲ್ಲೂರು-ಕಮ್ರಾಜ್ ಗ್ರಾಮದಲ್ಲಿ 6-00 ಎಕರೆಯಲ್ಲಿ ಮೆ: ಮಣಿ ಮೈನ್ಸ್ ಅಂಡ್ ಮಿನರಲ್ಸ್ ರವರಿಗೆ ಕೊರಂಡಮ್ ಖನಿಜಕ್ಕೆ ಅನ್ವೇಷಣಾ ಲೈಸೆನ್ಸ್ ಸಂಖ್ಯೆ: 3345ನ್ನು ಎರಡು ವರ್ಷಗಳ ಅವಧಿಗೆ ದಿನಾಂಕ: 03.5.2002 ರಿಂದ ನೀಡಿದೆ.

ಆ. 2001-2002ನೇ ಸಾಲಿನಲ್ಲಿ ಈ ಗುತ್ತಿಗೆಗಳಿಂದ ರೂ. 2,93,810.00 ರಾಜಧನ ನಿಗದಿಪಡಿಸಲಾಗಿದ್ದು, ರೂ. 1,91,710.00 ಸಂಗ್ರಹವಾಗಿದೆ.

ಇ. ಈ ಪ್ರದೇಶಗಳಲ್ಲಿ ಖನಿಜ ಸಾಗಾಣಿಕೆಯ ವಾಹನಗಳಲ್ಲದೆ, ಬೇರೆ ಬೇರೆ ಉದ್ದೇಶಗಳನ್ನೊಳಗೊಂಡ ವಾಹನಗಳ ಸಂಚಾರವೂ ಸಹಾ ಇರುವುದರಿಂದ, ಗ್ರಾಮಾಂತರ ಪ್ರದೇಶದಲ್ಲಿರುವ ಡಾಂಬರ್ ರಸ್ತೆ ಹಾಗೂ ಕಚ್ಚಾ ರಸ್ತೆಗಳು ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. (ನಾಟಾ ಸಾಗಾಣಿಕೆ ವಾಹನಗಳು, ಕೃಷಿಗೆ ಸಂಬಂಧಿಸಿದಂತೆ ಸಂಚರಿಸುವ ವಾಹನಗಳು ಮತ್ತು ಇತರೆ ಸಾರ್ವಜನಿಕ ವಾಹನಗಳು ಸಂಚರಿಸುತ್ತವೆ.

ಈ. ಗುತ್ತಿಗೆದಾರರು ಹೊಂದಿರುವ ಗುತ್ತಿಗೆ ಕರಾರಿನಂತೆ ಭಾಗ-11 ಕ್ರಮಸಂಖ್ಯೆ: 4 ರಂತೆ ಲಭ್ಯವಿರುವ ರಸ್ತೆಗಳನ್ನು ಖನಿಜ ಸಾಗಾಣಿಕೆಗೆ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.

## ರೇಷ್ಮೆ ಬೆಳೆಯ ಬೆಲೆ ಕುಸಿತ

1782(2325): ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರೇಷ್ಮೆ ಬೆಳೆಯ ಬೆಳೆಯಲ್ಲಿನ ಏರಿಳಿತದಿಂದಾಗಿ ರಾಜ್ಯದಲ್ಲಿ ರೈತರು ಕಂಗಾಲಾಗಿರುವುದನ್ನು ಸರ್ಕಾರವು ಗಮನಿಸಿದೆಯೇ?

ಆ. ರೇಷ್ಮೆ ಬೆಳೆಯ ಬೆಲೆ ಸ್ಥಿರೀಕರಣಗೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಹೌದು

ಆ. ಚೀನಾ ದೇಶದಿಂದ ಅಮದಾಗುವ ಕಚ್ಚಾ ರೇಷ್ಮೆ ಪ್ರಮಾಣ ಹೆಚ್ಚಾಗಿದ ಕಾರಣ ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಗೂಡಿನ ಧಾರಣೆ ಕಡಿಮೆಯಾಗಿ ರೇಷ್ಮೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಬಗ್ಗೆ ಸರ್ಕಾರವು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ಮಾನ್ಯ ಮುಖ್ಯ ಮಂತ್ರಿಗಳು, ರೇಷ್ಮೆ ಮತ್ತು ಜವಳಿ ಸಚಿವರು, ಮಾನ್ಯ ಪ್ರಧಾನ ಮಂತ್ರಿಗಳು, ಕೇಂದ್ರ ಸರ್ಕಾರದ ಹಣಕಾಸು ಸಚಿವರು, ಜವಳಿ ಸಚಿವರು ಮತ್ತು ವಾಣಿಜ್ಯ ಸಚಿವರನ್ನು ಸ್ವತಃ ಭೇಟಿ ಮಾಡಿ ಕೆಳಕಂಡ ಅಂಶಗಳ ಮೇಲೆ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.
   - ಅ. ಅಮದು ಸುಂಕವನ್ನು ಹೆಚ್ಚಿಸುವುದು
   - ಆ. ರಫ್ತು ಮಾಡುವ ಜವಳಿ ಉತ್ಪಾದನೆಗೆ ಬಳಸುವ ರೇಷ್ಮೆ ಪ್ರಮಾಣ ಮತ್ತು ಗುಣಮಟ್ಟದ ರೇಷ್ಮೆ ಆಮದಿಗೆ ಮಾತ್ರ ಅನುಮತಿ ನೀಡುವುದು.
   - ಇ. ಆಮದನ್ನು ಕೇಂದ್ರ ರೇಷ್ಮೆ ಮಂಡಳಿ ಮೂಲಕ ಮಾತ್ರ ಮಾಡಿ ವಿತರಿಸುವುದು.
   - ಈ. ಮಶಪಡಿಸಿದ ರೇಷ್ಮೆಯನ್ನು ಸರ್ಕಾರಿ ಸಂಸ್ಥೆಗಳ ಮೂಲಕ ಹರಾಜು ಮಾಡುವುದು.
   - ಉ. ಕಳ್ಳ ಸಾಗಾಣಿಕೆ ತಡೆಗಟ್ಟುವುದು.
2. ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು:ರೇಷ್ಮೆ ಧಾರಣೆಗಳ ದೃಢತೆಗಾಗಿ ಸರ್ಕಾರಿ ಸಂಸ್ಥೆಗಳಾದ ಕೆಎಸ್ಐಸಿ:ಕೆಎಸ್ಎಂಬಿ ಗಳಿಗೆ ರೇಷ್ಮೆ ಗೂಡು: ರೇಷ್ಮೆಯನ್ನು ಖರೀದಿಸಲು ಹಣ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.